
# ಕಾನನ

ಮೇ-2025

ನಿಸರ್ಗದೆಡೆಗೆ ಪಯಣ



WCG
Wildlife Conservation Group

# ಕಾನನ

## ನಿಸರ್ಗದೆಡೆಗೆ ಪಯಣ



**ಪ್ರಧಾನ ಸಂಪಾದಕರು**

ಡಾ. ಅಶ್ವಥ ಕೆ. ಎನ್.

**ಮುಖ್ಯ ಸಂಪಾದಕರು**

ನಾಗೇಶ್ ಓ. ಎಸ್.

**ಸಹ ಸಂಪಾದಕರು**

ಧನರಾಜ್ ಎಂ.

ಮಹದೇವ ಕೆ. ಸಿ.

**ಸಂಪಾದಕೀಯ ತಂಡ**

ವಿಪಿನ್ ಬಾಳಿಗ ಬಿ. ಎಸ್.

ಆನಂದ್ ಎಸ್.

ಮುರಳಿ ಎಸ್.

ಹುಸೇನ್ ನೇಣಿಕೆ

ಶ್ರುತಿ ರೈ ಕೆ.

© ಡಾ. ಅಶೋಕ್. ಕೆ. ಆರ್.

ಮೇ–2025

## ಲೇಖನಗಳು

* ಹೀಗೊಂದು ಸಂಜೆ – ವನಜಾಕ್ಷಿ ಎಸ್.
* "ಬುಲ್ ಬುಲ್" ಮಾತಾಡಕ್ಕಿಲ್ವಾ. ಹಾಡೇ ಹಾಡ್ತಾಳೆ! – ಹರ್ಷಿತ ಪಿ. ಹನುಮಯ್ಯ
* ರೈತನ ಮಿತ್ರ ಗಂಗೆ ಹುಳು – ಸಂತೋಷ್ ರಾವ್ ಪೆರ್ಮುಡ
* ಸಾಮಾನ್ಯ ತೋಳ ಹಾವು – ಡಾ. ಎಸ್. ಶಿಶುಪಾಲ
* ಗ್ರಹಾನುಗ್ರಹ!... (ವಿವಿ ಅಂಕಣ) – ಜೈಕುಮಾರ್ ಆರ್.
* ಪರಿಸರ ಉಳಿಸಿ (ಕವನ) – ರಾಮಲಿಂಗ ಮಾಡಗಿರಿ
* ಪ್ರಕೃತಿ ಬಿಂಬ – ಅರವಿಂದ ಕೂಡ್ಲ, ದೀಪ್ತಿ ಎನ್.



**ಮುಖಪುಟ ಛಾಯಾಚಿತ್ರ**
ಹಪ್ಪಟೆ ಹಾವು

**ಮುಖಪುಟ**
ವಿಪಿನ್ ಬಾಳಿಗ

**ವಿನ್ಯಾಸ**
ಧನರಾಜ್ ಎಂ.

© ಗುರುಪ್ರಸಾದ್ ಕೆ. ಆರ್.




# ಹೀಗೊಂದು ಸಂಜೆ

ಹೀಗೆ ಒಂದು ಸಂಜೆ ಮೈಸೂರಿನಲ್ಲಿರುವ ನಾನು, ಬೆಂಗಳೂರಿನಲ್ಲಿರುವ ಅಣ್ಣನಿಗೆ ಕರೆ ಮಾಡಿದೆ. ಅವನೊಬ್ಬ ಹವ್ಯಾಸಿ ಛಾಯಾಗ್ರಾಹಕನಾಗಿರುವುದರಿಂದ “ವಿದ್ಯಾರಣ್ಯಪುರದ ನರಸೀಪುರ ಕೆರೆಯ ಬಳಿ ಪಕ್ಷಿಗಳ ಚಿತ್ರ ತೆಗೆಯಲು ಕಾಯ್ತಾ ಕುತ್ಕೊಂಡಿದ್ದೀನಿ” ಅಂದ. ನಾನು “ಹೋ!! ಯಾವ್ದು ಬೇಟೆ ಆಗ್ಲಿಲ್ವ?” ಅಂದೆ. “ಇನ್ನೂ ಇಲ್ಲ ಕಣೆ” ಅಂದ, ಅದು ಇದು ಮಾತಾಡ್ತಾ ಇದ್ದಾಗ “ಒಂದು ನಿಮಿಷ ಇರು” ಅಂತ ಫೋನ್ ಕೆಳಕ್ಕೆ ಹಾಕಿ ಕ್ಯಾಮೆರಾ ತಗೊಂಡು ಕ್ಲಿಕ್ ಕ್ಲಿಕ್ ಮಾಡಿದ ಸದ್ದು ಕೇಳಿಸ್ತು. ನಾನು ಕುತೂಹಲದಿಂದ “ಏನಾಯ್ತು? ಏನ್ ಸಿಕ್ತು?” ಅಂತ ಕೇಳ್ತಾನೆ ಇದ್ದೆ. ಫೋನ್ ತಗೊಂಡ ಅಣ್ಣ “ಲೇ ನಿನ್ ಜೊತೆ ಮಾತಾಡ್ತಿದ್ದಾಗ ಒಂದು ಅಮೇಜಿಂಗ್ ಫೋಟೊ ಸಿಕ್ತು ಕಳಿಸ್ತೀನಿ ನೋಡು” ಅಂದ.

ಫೋಟೋ ನೋಡಿದ ನನಗೆ ಇದೊಂದು ಅದ್ಭುತ ಕ್ಲಿಕ್ ಅನಿಸಿ, “ಹೀಗೂ ಆಗುತ್ತ!” ಅಂದೆ. ಅಣ್ಣ “ನೀನು ಫೋನ್ ನಲ್ಲಿ ಇಲ್ದೆ ಹೋಗಿದ್ರೆ ಈ ಫೋಟೋನ ಇನ್ನು ಅದ್ಭುತವಾಗಿ ತೆಗಿಬಹುದಿತ್ತು. ನಾನು ಗಮನಿಸಿ ಕ್ಯಾಮೆರಾ ತಗೋಳೋಷ್ಟ್ರಲ್ಲಿ ಸ್ವಲ್ಪ ತಡವಾಯ್ತು” ಅಂತ ಅಂದ. ಅದಕ್ಕೆ ನಾನ್ ಬಿಡ್ತೀನಾ, “ಹಲೋ ಗುರು ನೀನು ಹೋಗಿ ಒಂದು ಗಂಟೆ ಆದ್ರು ನಿನಗೊಬ್ರು ಸಿಕ್ಕಿರಲಿಲ್ಲ. ನಾನು ಫೋನ್ ಮಾಡಿ ಮಾತಾಡ್ತಾ ಇದ್ದದ್ದಕ್ಕೇನೆ ಈ ಮೂವರು ಸಿಕ್ಕಿದ್ದು” ಅಂತ ಮರುನುಡಿದೆ. ಇಲ್ಲಿರುವ ಫೋಟೋನೆ ಅದು.

ಆಹಾರ ಸರಪಳಿ ಕೇಳಿದ್ದೀನಿ. ಈ ತರದ ಕೊಂಡಿಯೊಂದಿಗಿನ ಸರಪಳಿಯನ್ನ ಇದೇ ಮೊದಲ ಬಾರಿ ನೋಡ್ತಿರೋದು ಅಂದೆ.

ಅಣ್ಣ ಈ ಛಾಯಾಚಿತ್ರದ ಒಳನೋಟ ಹೀಗಾಗಿರಬಹುದೆಂದು ವಿವರಿಸ್ತಾ ಹೋದ. "ನೋಡು ಆ 'ಬ್ರಾಹ್ಮಿಣಿ ಗಿಡುಗ' ಬಂದಿದ್ದು ಮೀನಿನ ಒದ್ದಾಟ ನೋಡಿ. ಯಾಕಂದ್ರೆ ಈ ಕೆರೇಲಿ ಜಲಸಸ್ಯಗಳೇ ಜಾಸ್ತಿ ಇವೆ. ಮೇಲಿಂದ ಗಿಡುಗ ನೋಡಿದಾಗ ಮೀನಿರುವ ಜಾಗ ನೋಡಿತೇ ವಿನಃ, ಮೀನಿನ ಬಾಲವನ್ನ ಹಾವು ಹಿಡಿದಿರೋದು ನೋಡಿಲ್ಲ. ಹಾಗಾಗಿ ಆ ಮೀನನ್ನು ಗಾತ್ರವನ್ನು ಎತ್ತಲು ಬೇಕಾಗುವಷ್ಟು ಶಕ್ತಿ ಉಪಯೋಗಿಸಿ ಮೀನಿನ್ನು ಹಿಡಿದು ಎತ್ತಿದೆ. ಗಿಡುಗ ಹಿಡಿದಿರುವಷ್ಟೇ ಬಲವಾಗಿ ಹಾವೂ ಮೀನನ್ನ ಹಿಡಿದಿದ್ದರಿಂದ ಹಾಗೂ ಆಗಂತುಕನ ಆಗಮನವನ್ನೂ ನಿರೀಕ್ಷಿಸದೇ ಇದ್ದುದರಿಂದ ಮೀನನ್ನು ಬಿಟ್ಟಿಲ್ಲ. ಮೀನಿನ ಇನ್ನೊಂದು ತುದಿ ಗಿಡುಗ ಹಿಡಿದು ಎತ್ತಿದ್ದರಿಂದ ಮೀನಿನ ಜೊತೆ ಜೊತೆಗೆ ಹಾವು ನೀರನ್ನು ಬಿಟ್ಟು ಮೇಲೆ ಬಂದಿದೆ. ಗಿಡುಗ ಮೀನಿಗಷ್ಟೇ ಬಲಪ್ರಯೋಗ ಮಾಡಿದ್ದರಿಂದ ಹಾವಿನ ತೂಕವನ್ನೂ ತನ್ನ ಕಾಲಿನಲ್ಲಿ ಹಿಡಿದುಕೊಳ್ಳಲು ಆಗದೆ ಕಾಲಿನಿಂದ ಜಾರಿ ಮತ್ತೆ ನೀರೊಳಗೆ ಬಿದ್ದಿದೆ."









ನಾನು "ಅಬ್ಬಾ! ಉಳಿವಿಗಾಗಿ ಹೋರಾಟ ಕೇಳ್ತಾ ಇರ್ತೀವಿ ಜೊತೆ ಜೊತೆಗೆ ಆಹಾರ ಸರಪಳಿಯನ್ನೂ. ಇದೊಂದು ಎರಡೂ ರೀತಿಯ ಉದಾಹರಣೆಯನ್ನು ತಿಳಿಸುವಂತಹ ಚಿತ್ರ. ಹೇಗೆ ಅಂದ್ರೆ ನೋಡು ಹಾವು ಮೀನನ್ನು ಹಿಡಿದಾಗ ಮೀನು ಒದ್ದಾಡುತ್ತದಲ್ವ ಅದು ಹೇಗಾದರೂ ಮಾಡಿ ಹಾವಿನ ಬಾಯಿಂದ ತಪ್ಪಿಸಿಕೊಳ್ಳುವ ತಂತ್ರ. ಹಾಗೆಯೇ ಮೀನನ್ನು ಹಾವು ತಿನ್ನುತ್ತದೆ, ಹದ್ದು ತಿನ್ನುತ್ತದೆ. ಈ ಚಿತ್ರದಲ್ಲಿ ಮೀನಂತೂ ಹೇಗಿದ್ದರೂ ಇಬ್ಬರಲ್ಲಿ ಒಬ್ಬರಿಗೆ ಆಹಾರವಾಗೋದು ಖಚಿತ. ಗಿಡುಗನ ಕಾಲಿನಿಂದ ಜಾರಿದ ಮೀನು ತನ್ನನ್ನೇ ತಿನ್ನಲು ಬಂದ ಹಾವಿನ ಪ್ರಾಣ ಉಳಿಸಿದೆ. ಪಾಪ ಗಿಡುಗನದು ಆ ದಿನ ದುರದೃಷ್ಟ ದಿನ. ಆದರೆ ಅದೇ ಮೀನು ಮತ್ತು ಹಾವು ಎರಡೂ ಅದರ ಪಾಲಾಗಿದ್ದರೆ ಅವತ್ತಿನ ಅದರ ಬೇಟೆ ನಿಂತು ಎರಡನ್ನೂ ತಿಂದು ಹಾಯಾಗಿ ನಿದ್ರಿಸುತ್ತಿತ್ತೇನೊ."




**ಲೇಖನ: ವನಜಾಕ್ಷಿ ಎಸ್.**
ಮೈಸೂರು ಜಿಲ್ಲೆ

© ಗುರುಪ್ರಸಾದ್ ಕೆ. ಆರ್.






# "ಬುರ್ ಬುರ್" ಮಾತಾಡಕ್ಕಿಲ್ವಾ. ಹಾಡೇ ಹಾಡ್ತಾಳೆ!

ಎಲ್ಲರ ಬೆಳಿಗ್ಗೆ ಶುರುವಾಗೋದು ಒಂದೊಂದ್ ತರ; ಅದರಲ್ಲೂ ನನ್ನದು ವಿಚಿತ್ರವೇ ಸರಿ. ಅಲಾರಾಂ ಸದ್ದಿಗೆ ಅಥವಾ ರೂಡಿಯಿಂದ ಏಳುವವರನ್ನು ನೋಡಿರ್ತೀರಿ. ಆದ್ರೆ ನಾನು ಎದ್ದೇಳೋದು ಮಾತ್ರ ನಮ್ಮ 'ಮಿಂಚು' ಕಿಟಕಿ ಹತ್ರ ಬಂದು ಹಾಡು ಹೇಳಿದಾಗ ಬಿಟ್ಟರೆ ನಮ್ಮ ಅಮ್ಮ ಜೋರಾಗಿ ನನ್ನ ಹೆಸ್ರು ಕೂಗಿದಾಗ ಮಾತ್ರ!

ಅಮ್ಮ ಓಕೇ ಆದ್ರೆ, ಈ ಮಿಂಚು ಯಾರು? ಅನ್ನೋದು ತಾನೇ ನಿಮ್ಮ ಡೌಟು?


ಹೇಳ್ತೀನಿ ಹೇಳ್ತೀನಿ …

ಮಿಂಚು; ಕೆಂಪು ಕಪೋಲದ ಪಿಕಳಾರ (Red whiskered bulbul) ಅಥವಾ ಇದನ್ನ ಕೆಮ್ಮೀಸೆ ಪಿಕಳಾರ ಅಂತಾನೂ ಕರೀತಾರೆ. ಇದು ಗುಬ್ಬಚ್ಚಿಗಿಂತ ಸ್ವಲ್ಪ ದೊಡ್ಡದು, ಇವುಗಳನ್ನು ಕಾಡುಗಳಲ್ಲಿ, ಉದ್ಯಾನವನಗಳಲ್ಲಿ, ಹೂದೋಟಗಳಲ್ಲಿ ಹೀಗೆ ಎಲ್ಲೆಡೆ ನೋಡಬಹುದು. ಈ ಹಕ್ಕಿಯು ಭಾರತದಾದ್ಯಂತ ಕಾಣಸಿಗುತ್ತದೆ. ಕರ್ನಾಟಕದಲ್ಲಿ ಈ ಜಾತಿಯಲ್ಲಿನ ಅನೇಕ ಪ್ರಭೇದಗಳು ಕಂಡು ಬರುತ್ತದೆ. ಕೆಂಪು ಕಪೋಲದ ಪಿಕಳಾರ/ಕೆಮ್ಮೀಸೆ ಪಿಕಳಾರ, ಕರಿ ಪಿಕಳಾರ, ಹಳದಿ ಕತ್ತಿನ ಪಿಕಳಾರ, ಬಿಳಿ ಹುಬ್ಬಿನ ಪಿಕಳಾರ ಹೀಗೆ ಇದರ ಪ್ರಭೇದಗಳು ನಗರದಲ್ಲಿನ ಹೂದೋಟಗಳಿಂದ ಹಿಡಿದು ಮಲೆನಾಡ ಕಾಡುಗಳವರೆಗೂ ವಿಸ್ತರಿಸಿವೆ.

ಈ ಕೆಂಪು ಕಪೋಲದ ಪಿಕಳಾರ 20 ಸೆಂಟಿ ಮೀಟರ್ ಗಾತ್ರವಿದ್ದು, ಕಪ್ಪು ಬಣ್ಣದ ಜುಟ್ಟು, ಬಿಳಿಯ ಎದೆ, ಕೆಂಪು ಬಣ್ಣದ ಗಲ್ಲ, ಕಂದು ಬಣ್ಣದ ಬೆನ್ನು ಮತ್ತು ಬಾಲ ಇದರ ಗುರುತಿನ ಚಿಹ್ನೆಗಳು.

ಇದು ಕೂಡ ಹೂವಿನ ಮಕರಂದ, ಹಣ್ಣು, ಕ್ರಿಮಿ-ಕೀಟಗಳನ್ನು ತನ್ನ ಆಹಾರಕ್ಕಾಗಿ ಅವಲಂಬಿಸಿದೆ. ನಾನು ಆಗ್ಲೇ ಹೇಳಿದ ಹಾಗೆ ಹೂದೋಟದಲ್ಲಿ ಹೆಚ್ಚು ಕಾಣಬಹುದು. ಹಾಗೆ ನಮ್ಮ ಮನೆಯಲ್ಲಿನ ತೋಟದಲ್ಲಿಯೂ ಇವಳದ್ದೇ ದರ್ಬಾರು! ನಮ್ಮ ಮನೆಯ ದಾಸವಾಳ, ಮಲ್ಲಿಗೆ ಗಿಡಗಳಲ್ಲಿ ಹಾಗು ಸಪೋಟ ಮರದಲ್ಲಿ ಹೆಚ್ಚು ಸಮಯ ಕಳೆಯುತ್ತಾಳೆ.

ಇವು ಪೊದೆಗಳಲ್ಲಿ ನಾರು, ಹುಲ್ಲು, ಜೇಡರ ಬಲೆಗಳಿಂದ ಬಟ್ಟಲಿನಾಕಾರದಲ್ಲಿ ಗೂಡು ಕಟ್ಟಿಕೊಳ್ಳುತ್ತವೆ. ಇದರ ಮೊಟ್ಟೆಗಳು ನೋಡಲು ಬಹು ಆಕರ್ಷಕ; ಮೊಟ್ಟೆಯ ಹೊರಭಾಗ ಪಿಂಕ್ ಬಣ್ಣದಲ್ಲಿದ್ದು, ಅದರ ಮೇಲೆ ಗಾಢವಾದ ಕೆಂಪು ಚುಕ್ಕಿಗಳನ್ನು ಕಾಣಬಹುದು.





ಈ ಕೆಮ್ಮೀಸೆ ಪಿಕಳಾಗಳು 2-3 ಮೊಟ್ಟೆಗಳನ್ನು ಇಟ್ಟು; 14 ದಿನಗಳವರೆಗೆ ಹೆಣ್ಣಾಗಲಿ ಗಂಡಾಗಲಿ ಅಥವಾ ಇಬ್ಬರು ಸೇರಿ ಕಾವು ಕೊಟ್ಟು ಸಲಹುತ್ತವೆ. 12-14 ದಿನಗಳ ಒಳಗೆ ಈ ಮರಿಗಳು ಮೊಟ್ಟೆಯಿಂದ ಆಚೆ ಬಂದು 14 - 18 ದಿನಗಳ ನಂತರ ಹಾರಲು ಶುರು ಮಾಡುತ್ತವೆ. ಈ ಮರಿಗಳನ್ನು ಇಬ್ಬರು ಪೋಷಕರು ಸಣ್ಣ ಹುಳುಗಳನ್ನು ಕೊಟ್ಟು ಬೆಳೆಸ್ತಾರೆ. ಕಾಲ ಕ್ರಮೇಣ ಹಣ್ಣುಗಳನ್ನು ಕೊಟ್ಟು ಸಲಹುತ್ತಾರೆ.

ಪಿಕಳಾರದ ಇನ್ನೊಂದು ವಿಶೇಷತೆ ಅಂದ್ರೆ ಇದು ಯಾವುದಾದರೂ ಬೇರೆ ಜೀವಿಗಳಿಂದ ತೊಂದರೆ ಇದೆ ಎಂದು ತಿಳಿದಾಗ ಸುಸ್ತಾಗಿರೋ ತರನೋ, ಇಲ್ಲಾ ಏನೋ ಆಗೋಗಿದೆ ಅನ್ನೋ ಹಾಗೆ ನೆಪ ಮಾಡ್ಕೊಂಡು ತಪ್ಪಿಸಿಕೊಳ್ಳುತ್ತೆ. ಎಷ್ಟು ಕಿಲಾಡಿ ಅಲ್ವಾ ನಮ್ 'ಮಿಂಚು'!

ಬೆಳಿಗ್ಗೆ ಆದ್ರೆ ಸಾಕು ಶಿಳ್ಳೆ ಹೊಡ್ಕೊಂಡು, ಹಾಡು ಹೇಳ್ಕೊಂಡು ಕಿಟಕಿ ಹತ್ರ ಬಂದ್ಲು ಅಂದ್ರೆ ಎದ್ದೇಳ್ಬೇಕು ಅಷ್ಟೇ. ಹಾಗೆ ಕಾಟ ಕೊಡ್ತಾಳೆ. ನೋಡಿ ಹೇಗಾಗಿದೆ ನನ್ ಪರಿಸ್ಥಿತಿ. ಮುಂಚೆ ನಮ್ ಅಮ್ಮಂಗೆ ಹೆದರಿಕೊಳ್ತಿದ್ದೆ ಈಗ ಇವಳಿಗೂ ಹೆದರಿಕೊಳ್ಳೋ ಹಾಗೆ ಆಗಿದೆ!




**ಲೇಖನ: ಹರ್ಷಿತ ಪಿ. ಹನುಮಯ್ಯ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ**




# ರೈತನ ಮಿತ್ರ, ಗಂಗೆ ಹುಳು

ಗದ್ದೆಯ ಬದುವಿನಲ್ಲಿ ನಾನು ಮತ್ತು ನನ್ನ ತಮ್ಮ ಸಂದೇಶ್ ತೋಟದ ಕಡೆಗೆ ಸಾಗುತ್ತಿದ್ದೆವು. ಸ್ವಲ್ಪ ದೂರ ಬದುವಿನಲ್ಲಿ ಸಾಗಿದ್ದೆವಷ್ಟೇ, ತಮ್ಮ ಸಂದೇಶ್ ಅಲ್ಲೇ ನಿಂತು ಅಣ್ಣಾ ನಿನಗೆ ಚೆಂಡು ಬೇಕೇ ಎಂದು ಕೇಳಿದ. ಆಗ ನಾನು ಈ ಗದ್ದೆಯ ಬದುವಿನಲ್ಲಿ ಅದ್ಯಾವ ಚೆಂಡು ಎಂದು ಕೇಳುತ್ತಿದ್ದಂತೆಯೇ ತಮ್ಮ ಅಲ್ಲಿದ್ದ ಚೆಂಡನ್ನು ಎತ್ತಿಕೊಂಡು ಬಿಟ್ಟಿದ್ದ. ಆಗ ಜೊತೆಗಿದ್ದ ನನ್ನಪ್ಪ ಅದು ಚೆಂಡಲ್ಲಪ್ಪಾ, ಅದು ಒಂದು ಹುಳ. ಆದರೆ ಆ ಹುಳ ಚೆಂಡಿನಂತೆಯೇ ಇದೆ ಎಂದು ಅವರು ಅದನ್ನು ಕೈಯಿಂದ ಎತ್ತಿಕೊಂಡು ತೋರಿಸಿದರು.

ಹತ್ತಿರ ಹೋಗಿ ನೋಡಿದೆ. ಹೌದು, ಕಪ್ಪು ಬಣ್ಣದ ಚೆಂಡಿಗೆ ಅಲ್ಲಲ್ಲಿ ಬಿಳಿ ಬಣ್ಣವನ್ನು ಹಚ್ಚಿದ ಅಂದದ ಚೆಂಡಿನಂತೆ ಇತ್ತು. ಅದುವರೆಗೆ ತೋಟವನ್ನು ತಲುಪುವ ಧಾವಂತದಲ್ಲಿದ್ದ ನಮ್ಮೆಲ್ಲರ ಚಿತ್ತ ಒಮ್ಮಿಂದೊಮ್ಮೆಲೇ ಚೆಂಡು ಹುಳುವಿನ ಕಡೆಗೆ ತಿರುಗಿತು. ಚೆಂಡನ್ನು ಅಲ್ಲೇ ಬಿಟ್ಟು ಮುಂದಡಿ ಇಡಬಹುದಾಗಿದ್ದರೂ ಅದರ ವೈಶಿಷ್ಟ್ಯತೆಯನ್ನು ತಿಳಿಯಬೇಕೆಂದು ಅದನ್ನು ಹಾಗೇ ಕೈಯಲ್ಲಿ ಹಿಡಿದುಕೊಳ್ಳಲು ಹೇಳಿದೆ. ಆದರೆ ಅದನ್ನು ಹೇಗೆ ಹಿಡಿದುಕೊಳ್ಳುವುದು ಎಂದು ಯೋಚಿಸುತ್ತಿರುವಾಗ ಅಪ್ಪ ಹೇಳಿದರು, ಈ ಹುಳುವನ್ನು ಕೈಯಲ್ಲಿ ಹಿಡಿಯಬಹುದು, ಕಿಸೆಯಲ್ಲಿ ಹಾಕಿಕೊಳ್ಳಬಹುದು ಅಷ್ಟು ಸಾಧು ಪ್ರಾಣಿಯಿದು ಎಂದು ಹೇಳಿದರು.

ಆ ವೇಳೆಗಾಗಲೇ ಸಂದೇಶ್ ಆ ಚೆಂಡನ್ನು ಗದ್ದೆಯ ಬದುವಿನಲ್ಲಿ ಬಿಟ್ಟುಬಿಟ್ಟ. ಕೆಳಗೆ ಬಿಟ್ಟ ಕೂಡಲೇ ಅದು ನಿಧಾನವಾಗಿ ಚೆಂಡಿನ ರೂಪದಿಂದ ಬಿಚ್ಚಿಕೊಂಡಿತು. ನೋಡಿದರೆ ಚೆಂಡಿನ ರೂಪದಲ್ಲಿದ್ದ ಅದು 7-8 ಇಂಚು ಉದ್ದದ ಒಂದು ಹುಳು ಆಗಿತ್ತು. ತನ್ನ ಮೂತಿಯಲ್ಲಿದ್ದ ಎರಡು ಆಂಟೆನಾಗಳಂತಹ ಮೀಸೆಯನ್ನು ಬಳಸಿ ಮುಂದಕ್ಕೆ ಸಾಗಲು ಪ್ರಾರಂಭಿಸಿತು. ಕುತೂಹಲದಿಂದ ಅದನ್ನು ನಾನು ಮುಟ್ಟಿದಾಗ ಮತ್ತೆ ಅದು ಚೆಂಡಿನ ರೂಪಕ್ಕೆ ಮುದುಡಿಕೊಂಡಿತು. ಸಹಸ್ರಪದಿಗಳು ತಮ್ಮನ್ನು ಮುಟ್ಟಿದ ಕೂಡಲೆ ಸುರುಳಿಯ ಆಕಾರವನ್ನು ತಾಳುವಂತೆಯೇ, ಈ ಹುಳು ಚೆಂಡಿನ ಆಕಾರವನ್ನು ತಾಳುತ್ತದೆ. ಇದೇ ಕಾರಣಕ್ಕೆ ಇದನ್ನು 'ಪಿಲ್ಬಗ್' ಅಥವಾ 'ರೋಲಿ ಪಾಲಿ' ಎಂದೂ ಕರೆಯುತ್ತಾರೆ.

ಆ ಚೆಂಡನ್ನು ಎತ್ತಿಕೊಂಡು ಮನೆಗೆ ತಂದು ಬೆಳಕಿನಲ್ಲಿಟ್ಟು, ಅದು ತೆರೆದುಕೊಳ್ಳುತ್ತದೆಯೇ ಎಂದು ನೋಡುತ್ತಿದ್ದೆ. ಆದರೆ ಅದು ತೆರೆದುಕೊಳ್ಳಲೇ ಇಲ್ಲ. ಬೆಳಕನ್ನು ನಂದಿಸಿ ಕತ್ತಲೆ ಮಾಡಿದೆ ಆಗ ಅದು ಸ್ವಲ್ಪ ತೆರೆದುಕೊಂಡು, ಇಣುಕಿ ನೋಡಿ ಮತ್ತೆ ಚೆಂಡಿನ ಆಕಾರವನ್ನು ತಾಳಿತು. ಬಹುಶಃ ಅದಕ್ಕೆ ನುಣುಪಿನ ನೆಲದಲ್ಲಿ ಬಿಚ್ಚಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎಂದು ಭಾವಿಸಿ, ಅದನ್ನು ಮನೆಯ ಹೊರಗಡೆ ಬಿಟ್ಟೆ. ಅಲ್ಲಿ ಸ್ವಲ್ಪ ಹೊತ್ತಿನ ನಂತರ ಮೆಲ್ಲನೆ ಆ ಚೆಂಡು ತೆರೆದುಕೊಂಡು ಅತ್ತಿಂದಿತ್ತ ಮುಖವನ್ನು ತಿರುಗಿಸಿಕೊಂಡು ಓಡಾಡಲು ಪ್ರಾರಂಭಿಸಿತು. ಈ ಹುಳುವಿನ ಹೆಸರು 'ಗಂಗೆ ಹುಳು' ಎಂದು. ಕೆಲವರು ಇದನ್ನು 'ಉಂಡೆ ಹುಳ', 'ಗೋಲಿ ಹುಳ' ಎನ್ನುತ್ತಾರೆ.

'ಪಿಲ್ ಮಿಲ್ಲಿಪೇಡ್ (Pill millipede)' ಎನ್ನುವುದು ಇದರ ಆಂಗ್ಲ ಹೆಸರು. 'ಐಸೊಪಾಡ್' ಪ್ರಭೇದಕ್ಕೆ ಸೇರಿದ್ದು, ವೈಜ್ಞಾನಿಕವಾಗಿ ಇದನ್ನು 'ಗ್ಲೋಮೆರಿಸ್ ಮಾರ್ಜಿನೇಟ್' ಎಂದು ಕರೆಯುತ್ತಾರೆ. ಈ ಹುಳುಗಳು ಹೆಚ್ಚಾಗಿ ಪಶ್ಚಿಮಘಟ್ಟದ ಕಾಡಿನಲ್ಲಿ ಅದರಲ್ಲೂ ಮಳೆಗಾಲದ ಜೌಗು ಪ್ರದೇಶಗಳಲ್ಲಿ ಹೆಚ್ಚಾಗಿ ಕಾಣಿಸಿಕೊಳ್ಳುತ್ತದೆ. ಬೇಸಿಗೆ ಮತ್ತು ಚಳಿಗಾಲದಲ್ಲಿ ಇದು ಅಷ್ಟಾಗಿ ಕಾಣಿಸಿಕೊಳ್ಳುವುದಿಲ್ಲ. ಇವುಗಳು ಕೊಳೆತ ಎಲೆ ಮತ್ತು ಒಣಗಿದ ಮರಗಳಲ್ಲಿ ಮತ್ತು ತೋಟಗಳಲ್ಲೂ ಕಾಣಿಸಿಕೊಳ್ಳುತ್ತದೆ.

**ಗಂಗೆಯ ದೇಹ ರಚನೆ**:

ಗಂಗೆ ಹುಳುವಿನ ದೇಹರಚನೆ ಒಂದು ರೀತಿಯಲ್ಲಿ ವಿಭಿನ್ನವಾಗಿದ್ದು, ಇದರ ಮೂತಿಯ ಮುಂಭಾಗದಲ್ಲಿ ಎರಡು ಆಂಟೆನಾಗಳಂತಹ ಮೀಸೆಗಳಿರುತ್ತವೆ. ಈ ಮೀಸೆಗಳು ಅಲ್ಲಿನ ಪರಿಸರದಲ್ಲಿ ನಡೆಯುವ ಚಟುವಟಿಕೆಗಳನ್ನು ಗ್ರಹಿಸುವ ಸಂವೇದನಾ ಪ್ರಚೋದಕಗಳಾಗಿ ಕೆಲಸ ಮಾಡುತ್ತವೆ. ಮುಖದ ಮುಂಭಾಗದಲ್ಲಿ ಎರಡು ಸಣ್ಣದಾದ ಕಣ್ಣುಗಳಿರುತ್ತವೆ. ಮುಖವನ್ನು ಬಿಟ್ಟರೆ ಇದರ ದೇಹದಲ್ಲಿ ಸರಿ ಸುಮಾರು 10-12 ವಿಭಾಗಗಳಿರುತ್ತವೆ. ಅವುಗಳು ಕಪ್ಪು ಬಣ್ಣ ಇಲ್ಲವೇ ಕಂದು ಬಣ್ಣವಿರುತ್ತವೆ. ಪ್ರಬುದ್ಧ ಗಂಗೆ ಹುಳು 8-9 ಜೊತೆ ಕಾಲುಗಳನ್ನು



ಹೊಂದಿದ್ದು, ತಲೆಯ ನಂತರ ಒಂದೆರಡು ವಿಭಾಗಗಳನ್ನು ದಾಟಿದರೆ ಇದರ ಹೊಟ್ಟೆಯಿದ್ದು, ಕೊನೆಯ ವಿಭಾಗವೇ ಗುದದ್ವಾರ. ಇವುಗಳ ಹೊಟ್ಟೆಯ ಕೆಳಭಾಗವನ್ನು ನೋಡಿ ಗಂಡು ಮತ್ತು ಹೆಣ್ಣನ್ನು ಗುರುತಿಸಬಹುದು. ಗಂಡು ಗಂಗೆ ಹುಳುವಿನ ಎದೆಗೂಡಿನ ಮುಂಭಾಗದಲ್ಲಿ ಕಾಪ್ಯುಲೇಟರಿ ಅಂಗವಿದ್ದರೆ, ಹೆಣ್ಣು ಗಂಗೆ ಹುಳುವು ಗರ್ಭಿಣಿಯಾಗಿದ್ದರೆ ಬ್ರೂಡಿಂಗ್‌ಗಾಗಿ (ಮಾರ್ಸ್ಪಿಯಮ್) ಹೊಟ್ಟೆಯ ಭಾಗದಲ್ಲಿ ಒಂದು ಚೀಲವನ್ನು ಹೊಂದಿರುತ್ತದೆ. ಇದರ ದೇಹದ ಮೇಲ್ಭಾಗವು ತುಸು ಗಟ್ಟಿಯಾಗಿರುತ್ತದೆ. ನಿಧಾನವಾಗಿ ಹೆಜ್ಜೆಯಿಡುತ್ತಾ ಸಾಗುವ ಈ ಹುಳುವು ತಾನು ಅಪಾಯವನ್ನು ಗ್ರಹಿಸಿದ ಕೂಡಲೇ ಚೆಂಡಿನಂತೆ ಮುದುರಿಕೊಳ್ಳುತ್ತದೆ.

ಯುರೋಪ್, ಅಮೇರಿಕಾ, ದಕ್ಷಿಣ ಏಷ್ಯಾಗಳಲ್ಲಿ ಹೆಚ್ಚಾಗಿ ವಾಸಿಸುವ ಇವುಗಳು ಸೂರ್ಯನ ಬಿಸಿಲಿನಲ್ಲೂ ಕ್ರಿಯಾಶೀಲವಾಗಿ ಇರುತ್ತವೆ. ಸಾಮಾನ್ಯವಾಗಿ ಹುಳಗಳು ಬೆಳಕಿನ ಪ್ರಖರತೆಗೆ ಓಡಿ ಹೋದರೆ, ಗಂಗೆ ಹುಳು ಬಿಸಿಲಿಗೆ ಭಯಪಡುವುದಿಲ್ಲ. ಇವುಗಳು ತಾಪಮಾನ ಕಡಿಮೆಯಾದಾಗ ಪ್ರಖರ ಸೂರ್ಯನ ಬೆಳಕನ್ನು ಆಶ್ರಯಿಸಿದರೆ ತಾಪಮಾನ ಹೆಚ್ಚಾದಾಗ ನೆರಳಿನಲ್ಲಿ ಉಳಿಯುತ್ತವೆ. $-2^0$ C ಗಿಂತ ಕಡಿಮೆ ಅಥವಾ $36^0$ C ಗಿಂತ ಹೆಚ್ಚಿನ ತಾಪಮಾನ ಗಂಗೆ ಹುಳುವಿಗೆ ಮಾರಕವಾಗಿದೆ. ಈ ಹುಳುಗಳ ಸಾಧು ಸ್ವಭಾವದ ಕುರಿತು ತಿಳಿಯದ ಒಂದಷ್ಟು ಮಂದಿ ಈ ಹುಳುವನ್ನು ಗೊಬ್ಬರದಲ್ಲಿ ಕಂಡುಬರುವ ಹುಳುವೆಂದು ತಪ್ಪಾಗಿ ಭಾವಿಸಿ ಕೊಲ್ಲುವುದಿದೆ. ಆದರೆ ಇವುಗಳು ಮನುಷ್ಯನಿಗೆ ನಿರುಪದ್ರವಿ ಪ್ರಾಣಿಯೆಂದೇ ಹೇಳಲಾಗಿದೆ.

**ರಾಸಾಯನಿಕ ಸಂರಕ್ಷಣೆಯ ಜಾಣತನ:**




ತನಗೆ ಅಪಾಯ ಎದುರಾದ ಕೂಡಲೇ ಗಂಗೆ ಹುಳು ತನ್ನನ್ನು ತಾನು ಚೆಂಡಿನಂತೆ ಮಾರ್ಪಡಿಸಿಕೊಳ್ಳುತ್ತದೆ. ಚೆಂಡಿನ ಆಕಾರವನ್ನು ಇದು ತಾಳಿದೊಡನೆ ಅದು ಒಂದು ವಿಭಿನ್ನವಾದ ಕೆಟ್ಟ ವಾಸನೆಯ ರಾಸಾಯನಿಕವನ್ನು ಹೊರ ಸೂಸುತ್ತದೆ. ಅದು ಸೂಸುವ ರಾಸಾಯನಿಕದ ವಾಸನೆ ಮನುಷ್ಯನ ಮೂಗಿಗೆ ಅಷ್ಟೊಂದು ಗೋಚರ ಆಗದಿದ್ದರೂ ಅದನ್ನು ತಿನ್ನಲು ಬರುವ ಪ್ರಾಣಿಗಳು ಆ ವಾಸನೆಗೆ ದೂರ ಓಡುತ್ತವೆ. ಮನುಷ್ಯರಿಗೆ ಅಷ್ಟೊಂದು ಘಾಟು ಹೊಡೆಯದಿದ್ದರೂ, ಅದನ್ನು ತಿನ್ನಲು ಬಯಸುವ ಪ್ರಾಣಿಗಳನ್ನು ದೂರ ಓಡಿಸುವುದಲ್ಲದೇ, ಒಂದು ವೇಳೆ ಇದನ್ನು ಯಾವುದಾದರೂ ಪ್ರಾಣಿ ತಿಂದರೆ ಕೆಟ್ಟ ರುಚಿ ಇರುವಂತೆ ಮಾಡುತ್ತದೆ.

**ಸಂತಾನೋತ್ಪತ್ತಿಯ ವಿಧಾನ ಮತ್ತು ಆಯಸ್ಸು:**

ಗಂಗೆ ಹುಳುಗಳಲ್ಲಿ ಗಂಡು ಮತ್ತು ಹೆಣ್ಣು ಎಂಬ ಎರಡು ಲಿಂಗಗಳಿವೆ. ಹೆಣ್ಣು ಲೈಂಗಿಕಾಸಕ್ತಿಯನ್ನು ಹೊಂದಿದಾಗ ಅದು ವಿಶಿಷ್ಟವಾದ ಸದ್ದನ್ನು ಮಾಡುವ ಮೂಲಕ ಗಂಡು ಹುಳುವನ್ನು ಆಕರ್ಷಿಸುತ್ತದೆ. ಈ ಸಂದರ್ಭ ಮಿಲನವಾದರೆ ಹೆಣ್ಣು ಹುಳುವು ಸುಮಾರು 0.7 ಮಿ. ಮೀ ವ್ಯಾಸವಿರುವ 7-8 ಡಜನ್ ಮೊಟ್ಟೆಗಳನ್ನು ಇಡುತ್ತದೆ. ಇವು ಚಳಿ ಮತ್ತು ಬೇಸಿಗೆಯ ಕಾಲದಲ್ಲಿ ಮೊಟ್ಟೆ ಇಡುವುದು ಸಾಮಾನ್ಯ. ಒಂದು ಮೊಟ್ಟೆಯು ಒಡೆದು ಮರಿ ಆಗಬೇಕಾದರೆ ಕನಿಷ್ಟ ಎರಡು ತಿಂಗಳಾದರೂ ಬೇಕು. ವಾತಾವರಣವು ತಂಪಾಗಿದ್ದರೆ ಇದರ ಮೊಟ್ಟೆಗಳು ಒಡೆದು ಮರಿಯಾಗಲು ಹೆಚ್ಚು ಕಾಲಾವಕಾಶ ಬೇಕು. ಮರಿ ಹುಳುವು ಪ್ರೌಢಾವಸ್ಥೆಗೆ ತಲುಪಲು ಕನಿಷ್ಟ ಒಂದು ವರ್ಷವಾದರೂ ಬೇಕು. ಮೊಟ್ಟೆಯು ಒಡೆದ ನಂತರ, ಮರಿಗಳು 1-2 ವಾರಗಳ ಕಾಲ ತಮ್ಮ ತಾಯಿಯ ಹೊಟ್ಟೆಯ ಕೆಳಭಾಗದಲ್ಲಿ ಇರುವ ಚೀಲದಲ್ಲಿ ಇರುತ್ತವೆ. ಮರಿಗಳು ಸ್ವತಂತ್ರವಾಗಿ ಓಡಾಡಲು ಪ್ರಾರಂಭಿಸುವ ವೇಳೆಗೆ 2 ಮಿ. ಮೀ ಉದ್ದಕ್ಕೆ ಬೆಳೆದರೆ ಇವುಗಳ ಜೀವಿತಾವಧಿ 2-5 ವರ್ಷಗಳು.

**ಮನುಷ್ಯನಿಗೆ ಉಪಕಾರಿ ಜೀವಿ:**

ಮಣ್ಣಿನಲ್ಲಿ ಬಿದ್ದು ಕೊಳೆತಿರುವ ವಸ್ತುಗಳನ್ನು ಮತ್ತಷ್ಟು ಹದಗೊಳಿಸಿ ಅವುಗಳನ್ನು ಮಣ್ಣಿಗೆ ಸೇರಿಸಿ ಜೈವಿಕ ಗೊಬ್ಬರವಾಗಿ ವಿಭಜಿಸುವ ಪ್ರಮುಖ ಕೆಲಸವನ್ನು ಇವು ಮಾಡುತ್ತವೆ. ಇವುಗಳು ಸಸ್ಯಾಹಾರಿಗಳಾಗಿದ್ದು, ಮರದಲ್ಲಿರುವ ಪಾಚಿ, ಮರದ ತೊಗಟೆ ಮತ್ತು ಎಲೆಗಳೇ ಇದರ ಪ್ರಮುಖ ಆಹಾರ. ಇವುಗಳಿಗೆ ವಿಷ ಅಥವಾ ನಂಜು ಇಲ್ಲವಾದ್ದರಿಂದ ಇವುಗಳು ಕಚ್ಚಿದರೂ ಯಾವುದೇ ಅಪಾಯವಿಲ್ಲ.



**ಪ್ರಾಕೃತಿಕ ಮಹತ್ವ:**

ಇವುಗಳ ಮುಖ್ಯ ಆವಾಸ ಸ್ಥಾನವು ಹಸಿಗೊಬ್ಬರ, ಬಿದ್ದ ಎಲೆಗಳು ಮತ್ತು ಬಂಡೆಗಳ ಅಡಿಭಾಗವಾಗಿದ್ದು, ಇವುಗಳು ಮೊಳಕೆ ಮತ್ತು ಕೆಲವು ಸಸ್ಯ ಬೇರುಗಳಿಗೆ ಆಹಾರವನ್ನು ನೀಡುತ್ತವೆ. ಇವುಗಳ ಉಳಿವು ಪರಿಸರ ವ್ಯವಸ್ಥೆಯ ಮೇಲೆ ಸಕಾರಾತ್ಮಕ ಪರಿಣಾಮ ಬೀರಿದ್ದು, ಹೆಚ್ಚಿದ ಖನಿಜ ಪದರದ ಪೋಷಕಾಂಶಗಳು (ಸಾರಜನಕ, ರಂಜಕ ಮತ್ತು ಪೊಟ್ಯಾಸಿಯಮ್), ಹೆಚ್ಚಿದ ಪಿ. ಹೆಚ್ ಮತ್ತು ಬಿದ್ದ ಎಲೆಗಳಿಂದ ಹೊರಹಾಕಲ್ಪಟ್ಟ ಹೆಚ್ಚಿನ ಪ್ರಮಾಣದ ಇಂಗಾಲವನ್ನು ಇವುಗಳು ಸಸ್ಯಗಳಿಗೆ ಯಥೇಚ್ಛವಾಗಿ ನೀಡುತ್ತವೆ. ಇಷ್ಟೆಲ್ಲ ಪರಿಸರಸ್ನೇಹಿ ಗುಣವನ್ನು ಹೊಂದಿರುವ ಗಂಗೆ ಹುಳುಗಳು ಇಂದು ಕೃಷಿ ಭೂಮಿಗೆ ರೈತನು ಸುರಿಯುತ್ತಿರುವ ಅತಿಯಾದ ರಾಸಾಯನಿಕ ಗೊಬ್ಬರ ಮತ್ತು ಕೀಟನಾಶಕಗಳ ಕಾರಣದಿಂದ ಅಳಿವಿನ ಅಂಚಿನಲ್ಲಿವೆ. ರೈತಸ್ನೇಹಿ ಈ ಹುಳುಗಳನ್ನು ಮಣ್ಣಿನ ಫಲವತ್ತತೆಯನ್ನು ಹೆಚ್ಚಿಸುವ ಹಾಗೂ ಗಿಡಮರಗಳನ್ನು ಪೋಷಿಸುವುದರಿಂದ ಇವುಗಳನ್ನು ರಕ್ಷಿಸಬೇಕಾದ್ದು ಅತ್ಯವಶ್ಯಕ.




**ಲೇಖನ: ಸಂತೋಷ್ ರಾವ್ ಪೆರ್ಮುಡ**
ದಕ್ಷಿಣ ಕನ್ನಡ ಜಿಲ್ಲೆ




# ಸಾಮಾನ್ಯ ತೋಳ ಹಾವು

**ಇಂಗ್ಲಿಷ್ ಹೆಸರು:** ಕಾಮನ್ ವೂಲ್ಫ್ ಸ್ನೇಕ್ (Common Wolf Snake)
***ಪ್ರಾಣಿಶಾಸ್ತ್ರೀಯ ಹೆಸರು:*** *ಲೈಕೊಡಾನ್ ಅಯಿಲಿಕಸ್* (*Lycodon aulicus*)
**ಗಾತ್ರ:** ಹುಟ್ಟುವಾಗ: 14 ಸೆಂ. ಮೀ.
**ವಯಸ್ಕ:** 30 ಸೆಂ.ಮೀ. (ಸುಮಾರು 01 ಅಡಿ; 0.3 ಮೀಟರ್)
**ಗರಿಷ್ಟ:** 80 ಸೆಂ.ಮೀ. (ಸುಮಾರು 2.7 ಅಡಿ: 0.8 ಮೀಟರ್)

**ಗುಣಲಕ್ಷಣಗಳು:** ತೆಳುವಾದ ದೇಹ, ನಯವಾದ ಹುರುಪೆಗಳು. ಕುತ್ತಿಗೆಗಿಂತ ಸ್ವಲ್ಪ ದೊಡ್ಡದಾದ ಚಪ್ಪಟೆ ತಲೆ. ಮೂಗಿನ ತುದಿ ಕೆಳಗಿನ ದವಡೆಗಿಂತ ಮುಂದಿರುತ್ತದೆ. ಕಪ್ಪು ಕಣ್ಣುಗಳು. ಹೊಳಪಾದ ಕಂದು, ಕಪ್ಪು ಅಥವಾ ಬೂದು ಬಣ್ಣದ ದೇಹ. ಕುತ್ತಿಗೆಯಲ್ಲಿ ಹಳದಿ ಅಥವಾ ಬಿಳಿ ಬಣ್ಣದ ಪಟ್ಟಿಯಿರುತ್ತದೆ. ದೇಹದಲ್ಲಿ 10 ರಿಂದ 20ರ ತನಕ ಬಿಳಿ ಆಥವಾ ಹಳದಿ ಅಡ್ಡ-ಪಟ್ಟಿಗಳು. ಈ ಪಟ್ಟಿಗಳ ಪಾರ್ಶ್ವದಲ್ಲಿ ಸೀಳಿದಂತೆ ಕಾಣುತ್ತದೆ. ಅಡ್ಡ ಪಟ್ಟಿಗಳು ದೇಹದ ಮುಂಭಾಗದಲ್ಲಿ ಚೆನ್ನಾಗಿದ್ದು, ಕೊನೆಯ ಭಾಗದಲ್ಲಿ ಮಾಸಲು ಬಣ್ಣದ್ದಾಗಿರುತ್ತದೆ ಅಥವಾ ಇರುವುದಿಲ್ಲ. ಮೆಲ್ಹುಟಿ ಬಿಳಿಯಿದ್ದು ಕಂದು ಚುಕ್ಕೆಗಳಿರುತ್ತವೆ. ದೇಹದ ಕೆಳಭಾಗ ಬಿಳಿಯ ಬಣ್ಣದ್ದು. ಈ ಪ್ರಭೇದದ ಕೆಲವು ಹಾವುಗಳಲ್ಲಿ ಅಡ್ಡ ಪಟ್ಟಿಗಳು ಇರುವುದೇ ಇಲ್ಲ.

**ಆವಾಸ ಸ್ಥಳ/ಆಹಾರ/ಸಂತಾನಭಿವೃದ್ಧಿ:** ನಿಶಾಚರಿ. ಬಾವಿ, ಗುಹೆ, ಕಲ್ಲಿನರಾಶಿ, ಮರಗಳ ಪೊಟರೆಗಳಲ್ಲಿ ವಾಸ. ಗೋಡೆಗಳನ್ನು ಸಲೀಸಾಗಿ ಹತ್ತಬಲ್ಲದು. ಆಹಾರಕ್ಕಾಗಿ ಓತಿಕ್ಯಾತ ಮತ್ತು ಹಲ್ಲಿಗಳನ್ನು ತಿನ್ನುತ್ತದೆ. ಸಂತಾನಭಿವೃದ್ಧಿ ಸಮಯ- ದಕ್ಷಿಣ ಭಾರತದಲ್ಲಿ ಡಿಸೆಂಬರ್ ನಿಂದ ಜನವರಿವರೆಗೆ ಮತ್ತು ಉತ್ತರ ಭಾರತದಲ್ಲಿ ಮಾರ್ಚಿನಿಂದ ಜುಲೈವರೆಗೆ. ಐದರಿಂದ ಏಳು ಮೊಟ್ಟೆಗಳನ್ನಿಡುತ್ತದೆ.




**ಪ್ರಾಕೃತಿಕ ನಡವಳಿಕೆ:** ಬಹಳ ಹೆದರುವ ಹಾವು. ಮುಟ್ಟಿದರೆ ಕಚ್ಚುತ್ತದೆ ಆದರೆ ವಿಷವಿಲ್ಲ. ಅವಸರದಲ್ಲಿ ಹೋಗುವಾಗ ಮುಂದಿನ ಭಾಗದಿಂದ ಹಾರುವಂತೆ ಕಾಣುತ್ತದೆ.

**ವಿಸ್ತರಣೆ:** ಜಮ್ಮು-ಕಾಶ್ಮೀರ, ಲಡಾಖ್-ಗಳನ್ನು ಹೊರತು ಪಡಿಸಿ ಭಾರತದೆಲ್ಲಡೆ ಕಾಣಸಿಗುತ್ತದೆ. ಪಾಕಿಸ್ತಾನ, ನೇಪಾಳ, ಬಾಂಗ್ಲಾದೇಶ ಮತ್ತು ಶ್ರೀಲಂಕಾಗಳಲ್ಲೂ ವಾಸಿಸುವುದು.

**ಹೋಲಿಕೆ ಹಾವುಗಳು:** ಕಟ್ಟು ಹಾವುಗಳು. ಹಾಗಾಗಿ ಜನ ಕೆಟ್ಟಹುಳವೆಂದು ಕೊಲ್ಲುವರು. ನಿರುಪದ್ರವಿಯಾದ ಈ ಹಾವು ಜನರ ಮೂಢನಂಬಿಕೆಯಿಂದ ನಶಿಸುತ್ತಿದೆ.




**ಉರಗ ಸಂರಕ್ಷಣೆ ಸಂದೇಶ**

- ದಯಮಾಡಿ ಹಾವುಗಳನ್ನು ಕೊಲ್ಲಬೇಡಿ
- ಅವು ನಮ್ಮ ಜಾಗಗಳಿಗೆ ಬಂದಿಲ್ಲ. ಅವುಗಳ ಜಾಗವನ್ನು ನಾವು ಆಕ್ರಮಿಸಿದ್ದೇವೆ.
- ಹಾವುಗಳನ್ನು ಮತ್ತು ಅವುಗಳ ಚರ್ಮದಿಂದ ಮಾಡಿದ ಉತ್ಪನ್ನಗಳನ್ನು ಖರೀದಿಸಬೇಡಿ.
- ಉರಗ ರಕ್ಷಕರ ಕೆಲಸಕ್ಕೆ ಗೌರವ ಸೂಚಿಸಿ
- ಮೂಢನಂಬಿಕೆಗಳನ್ನು ನಿವಾರಿಸಲು ಸಹಾಯ ಮಾಡಿ.
- ಹಾವುಗಳ ಸಂರಕ್ಷಣೆಗೆ ತಮ್ಮಿಂದಾದ ಸಹಾಯ ಮಾಡಿ.
- ಜನರಿರುವ ಕಡೆ ಹಾವು ಕಾಣಿಸಿದಾಗ ಅರಣ್ಯ ಇಲಾಖೆ ಅಥವಾ ಉರಗ ರಕ್ಷಕರಿಗೆ ಕರೆ ಮಾಡಿ. ಹಾವುಗಳನ್ನು ಕೊಲ್ಲುವುದನ್ನು ತಪ್ಪಿಸಿ.




**ಲೇಖನ: ಡಾ. ಎಸ್. ಶಿಶುಪಾಲ**


ದಾವಣಗೆರೆ ಜಿಲ್ಲೆ





ವಿವಿ ಅಂಕಣ

# ಗ್ರಹಾನುಗ್ರಹ!...

ಆ ದಿನದ ಶುರುವಲ್ಲೇ ಒಂದು ಸುಳಿವಿನ ಹಾಗೆ ಹೊಟ್ಟೆ ಶಬ್ದ ಮಾಡುತ್ತಿತ್ತು. ಅದನ್ನು ಲೆಕ್ಕಿಸದೇ ಎಂದಿನಂತೆ ಆ ದಿನವೂ ಸಹ ಆಫೀಸಿಗೆ ಹೊರಟೆ. ಅಮ್ಮ ಮಾಡಿದ್ದ ಚಿತ್ರಾನ್ನವನ್ನು ಡಬ್ಬಿಗೆ ಹಾಕಿಕೊಂಡು ಅಲ್ಲೇ ತಿಂದೆ. ಅಷ್ಟು ದಿನ ದೇಹ ಹೇಗೋ ತಡೆದುಕೊಂಡಿತ್ತು ಎಂದು ಕಾಣುತ್ತದೆ. ಆ ವಾರ ಹೆಚ್ಚು ಬಿಸಿಲಿನಲ್ಲಿ ಓಡಾಟದ ಪರಿಣಾಮ ಉಷ್ಣ ಹಾಗೂ ನಾನು ಕೆಲವು ದಿನಗಳಿಂದ ಸತತವಾಗಿ ತಿನ್ನುತ್ತಿದ್ದ ಚಿಕನ್ ವೆರೈಟಿಗಳಿಗೂ ಹೊಂದಾಣಿಕೆಯಾಗಿ, ಅದನ್ನು ನನ್ನ ದೇಹ ಅಸೂಯೆಯಿಂದ ಒಪ್ಪದೆ ಅಜೀರ್ಣ ಮಾಡಿತ್ತು. ಫಲಿತಾಂಶ: ಅಜೀರ್ಣ ಹಾಗು ಅತಿಸಾರ. ಮೊದಲ ಬಾರಿಗೆ ಕೆಲವು ವರ್ಷಗಳ ನಂತರ ಅರ್ಧ ದಿನ ರಜೆ ಮಾಡಿ ಮನೆಗೆ ಹೋಗಿ ತಿಳಿದ ಎಲ್ಲಾ ರೀತಿಯ ಮನೆ ಮದ್ದನ್ನು ತೆಗೆದುಕೊಂಡು ವಿರಮಿಸುವಷ್ಟು ತೀವ್ರವಾಗಿತ್ತು ಅಂದು ನನ್ನ ಪರಿಸ್ಥಿತಿ. ಅದಕ್ಕೆ ಹೇಳುವುದು, 'ಕಣ್ಣಿಗೆ ಬೇಕೆಂದ ಹಾಗೆ ತಿನ್ನುವುದಲ್ಲ, ದೇಹಕ್ಕೆ ಬೇಕೆಂದ ಹಾಗೆ ತಿನ್ನಬೇಕು' ಎಂದು. ಆದರೆ ಇಲ್ಲಿ ಯಾವುದೋ ಗ್ರಹ, ಭೂಮಿಯಿಂದ ಸುಮಾರು 800 ಜ್ಯೋತಿರ್ವರ್ಷ ದೂರದಲ್ಲಿ ಇರುವ ನಮ್ಮ ಸೂರ್ಯನ ಹಾಗೆ ಒಂದು ನಕ್ಷತ್ರ ಇದ್ದು ಅದರ ಸುತ್ತ ಸುತ್ತುತ್ತಿರುವ ಒಂದು ಗ್ರಹವಿದ್ದು, ತನ್ನ ಉದರದಲ್ಲೂ ಅಜೀರ್ಣ ಸಮಸ್ಯೆ ಇರುವ ಹಾಗೆ ತನ್ನ ದೇಹದ ಭಾಗವನ್ನೇ ಬಾಹ್ಯಾಕಾಶಕ್ಕೆ ಉಗುಳುತ್ತಾ ಸಾಗುತ್ತಿದೆ. ಅದು ನೋಡಲು ನಮ್ಮ ಧೂಮಕೇತು ನಮ್ಮ ಸೂರ್ಯನ ಸುತ್ತ ಸುತ್ತುವಾಗ ಹಿಂದೆ ಬಿಡುವ ಬಾಲದಂತೆ ತನ್ನ ಹಿಂದೆಯೂ ಸಹ ಬಾಲವನ್ನು ಬಿಟ್ಟುಕೊಂಡು ತನ್ನ ನಕ್ಷತ್ರದ ಸುತ್ತ ತಿರುಗುತ್ತಿದೆ ಅಂತೆ. ಅಯ್ಯೋ ಅದರಲ್ಲೇನಿದೆ ಬಿಡೀ... ಇಂತಹ ಎಷ್ಟೋ ವಿದ್ಯಮಾನಗಳು ಬಾಹ್ಯಾಕಾಶದಲ್ಲಿ ನಡೆಯುತ್ತಿವೆ. ಎಂದು ತಾತ್ಸಾರ ಮಾಡದಿರಿ. ಏಕೆಂದರೆ ಹೀಗೆ ನಮ್ಮ ಸೂರ್ಯನಿಗೆ ಇಷ್ಟು ಹತ್ತಿರವಿರುವ ನಕ್ಷತ್ರದಲ್ಲಿನ ಗ್ರಹವೊಂದು ಹೀಗೆ ತನ್ನ ಮೇಲಿನ ವಸ್ತುಗಳನ್ನು ಬಾಹ್ಯಾಕಾಶಕ್ಕೆ ಉಗುಳುತ್ತಿರುವುದು ತಮ್ಮ ಅದೃಷ್ಟವೆಂದೇ ಅಂತರಿಕ್ಷ ತಜ್ಞರು ಭಾವಿಸುತ್ತಾರೆ.




ಅದೇಕೆ? ಅದರಲ್ಲೇನಿದೆ ವಿಶೇಷ? ಅಲ್ಲಿಗೇ ಬರುತ್ತಿರುವೆ. ವಿಜ್ಞಾನಿಗಳ ಪ್ರಕಾರ ದೂರದ ನಕ್ಷತ್ರ ಮಂಡಲದ ಗ್ರಹಗಳನ್ನು ಹಾಗೂ ಅವುಗಳು ಯಾವ ವಸ್ತುಗಳಿಂದ ಮಾಡಲ್ಪಟ್ಟಿವೆ ಎಂದು ಆ ಗ್ರಹಗಳು ಹೊರಸೂಸುವ 'ಎಲೆಕ್ಟ್ರೋ ಮ್ಯಾಗ್ನೆಟಿಕ್' ಅಲೆಗಳನ್ನು 'ಸ್ಪೆಕ್ಟ್ರೋಸ್ಕೋಪ್' ಗಳಂತಹ ಉಪಕರಣಗಳಿಂದ ಕಂಡು ಹಿಡಿಯುತ್ತಾರೆ. ಇದೇ ಈ ಗ್ರಹ ವಿಶೇಷ! ಏಕೆಂದರೆ ಇದು ತನ್ನ ಕೊನೆಯ ದಿನಗಳನ್ನು ಎಣಿಸುತ್ತಿದೆ. ಅದರಿಂದಾಗಿಯೇ ತನ್ನ ಮೇಲ್ಮೈ ನ ವಸ್ತುಗಳೊಂದಿಗೆ ತನ್ನ ಒಳ ಪದರದ ಒಳಗಿನ ವಸ್ತುಗಳನ್ನೂ ಸಹ ಆಕಾಶಕ್ಕೆ ಉಗುಳುತ್ತಿದೆ. ಇಂತಹ ವಿದ್ಯಮಾನ ಇದುವರೆಗೆ ಕಾಣಲು ಸಿಗಲಿಲ್ಲ. ಈಗ ಸಿಕ್ಕಿರುವ ಈ ಅವಕಾಶದಿಂದ ದೂರದ ಒಂದು ಗ್ರಹದ ಒಳ-ಹೊರಗೆ ಏನೇನಿದೆ, ಅದು ಯಾವ ಯಾವ ವಸ್ತುಗಳಿಂದ ಮಾಡಲ್ಪಟ್ಟಿದೆ ಎಂದು ನಿಖರವಾಗಿ ತಿಳಿಯಲು ನಮಗೆ ಸಿಕ್ಕಿರುವ ಒಂದು ಸುವರ್ಣಾವಕಾಶವೇ ಸರಿ! ಎಂದು ವಿಜ್ಞಾನಿಗಳು ಭಾವಿಸುತ್ತಾರೆ.




K2 22b ಎಂದು ಕರೆಯಲ್ಪಡುವ ಈ ಗ್ರಹ ಸದ್ಯಕ್ಕೆ ನಮ್ಮ ಅಂತರಿಕ್ಷ ತಜ್ಞರ ಫೇವರೇಟ್ ಗ್ರಹ. ಇದುವರೆಗೆ ಒಂದು ಅನ್ಯ ಗ್ರಹದ ಒಳಗೆ ಏನೇನಿದೆ, ಇದು ರಾಸಾಯನಿಕವಾಗಿ ಯಾವ ಯಾವ ವಸ್ತುಗಳಿಂದ ಮಾಡಲ್ಪಟ್ಟಿದೆ ಎಂದು ಯಾರಿಗೂ ಅರಿಯದ ವಿಚಾರ ಇವರೇ ಮಾಡುವ ಮೊದಲ ಅನ್ವೇಷಣೆ ಆಗಲಿದೆ. ಬಾಹ್ಯಾಕಾಶ ಅನ್ವೇಷಣೆಗೆಂದೇ ಭೂಮಿಯ ಹೊರಗೆ ಇಟ್ಟಿರುವ ಪ್ರಪಂಚದ ಅತಿ ದೊಡ್ಡ ದೂರದರ್ಶಕವಾದ 'ಜೇಮ್ಸ್ ವೆಬ್ ದೂರದರ್ಶಕ'ದ ಸಹಾಯದಿಂದ ಕಂಡುಕೊಂಡ ಅವರು ಈಗ ತಾನೇ ತಮ್ಮ ಸಂಶೋಧನೆಯ ಮೊದಲ ಹೆಜ್ಜೆಗಳನ್ನು ಇಡುತ್ತಿದ್ದಾರೆ. ಅದರ ಮೊದಲ ಅನ್ವೇಷಣೆ ವಿಚಾರ ಹೇಳುವುದಾದರೆ, ಸಾಮಾನ್ಯವಾಗಿ ಅನ್ಯ ಗ್ರಹಗಳು ಕಬ್ಬಿಣದಿಂದ ಆಗಿರುತ್ತವೆ. ಆದರೆ ಈ ಮೇಲೆ ಹೇಳಿದ ಹಾಗೆ ಈ ಗ್ರಹ ವಿಶೇಷವಲ್ಲವೇ? ಅದರಿಂದ ಇದು ಹೊರ ಬಿಡುತ್ತಿದ್ದ ಸುಮಾರು 90 ಲಕ್ಷ ಕಿಲೋ ಮೀಟರ್ ಉದ್ದ ಬಾಲದ ವಸ್ತುಗಳಿಂದ ಬಂದ ಬೆಳಕನ್ನು ಗಮನಿಸಿದಾಗ ತಿಳಿದದ್ದು, ಇದು ಕೇವಲ ಕಬ್ಬಿಣದಿಂದ ಆದದ್ದಲ್ಲ. ಅಥವಾ ಸಾಮಾನ್ಯವಾಗಿ ಒಂದು ಗ್ರಹದ ಒಳಗಿರುವ 'ಮೆಗ್ನೀಷಿಯಮ್ ಆಕ್ಸೈಡ್' ಅಥವಾ 'ಸಿಲಿಕಾನ್ ಮೊನಾಕ್ಸೈಡ್' ಆಗಿರಬಹುದು ಎಂದು ಪರೀಕ್ಷಿಸಿದರು. ಆದರೆ ಅವರ ಅಚ್ಚರಿಗೆ ಅದೂ ಅಲ್ಲ. ನಿಜ ಹೇಳುವುದಾದರೆ, ಆ ಗ್ರಹದಿಂದ ಬರುತ್ತಿರುವ ಆ ಅಲೆಗಳ ಆಧಾರವಾಗಿ ನೋಡುವುದಾದರೆ ಅದು ಹೊರಸೂಸುತ್ತಿರುವ ಅಲೆಗಳು ನಮ್ಮ ಭೂಮಿಯ ಮೇಲಿನ ಯಾವ ಮೂಲವಸ್ತುಗಳಿಗೂ ಹೊಂದಾಣಿಕೆ ಆಗುತ್ತಿಲ್ಲ! ಇದು ವಿಚಿತ್ರವಾದರೂ ಸತ್ಯ.

ಒಟ್ಟಿನಲ್ಲಿ, ನಾವು ಈ ದೇಹವನ್ನು ಬಿಟ್ಟು ಹೋಗುವಾಗ ನಮ್ಮ ಒಳಗಿನ ಎಲ್ಲಾ ಸರಿ-ತಪ್ಪುಗಳು, ಒಳ್ಳೆ ಕೆಲಸಗಳು, ಕೆಟ್ಟ ಘಟನೆಗಳು ಹೀಗೆ ಎಲ್ಲಾ ಗಾಢ ಅನುಭವಗಳು ಒಮ್ಮೆ ನಮ್ಮ ಕಣ್ಣ ಮುಂದೆ ಭಾಸವಾಗುತ್ತವೆ ಎನ್ನುತ್ತಾರೆ, ಹಾಗೆಯೇ ಈ ಸಾಯುತ್ತಿರುವ ಗ್ರಹದ ಅನುಗ್ರಹದಿಂದ (ಗ್ರಹಾನುಗ್ರಹದಿಂದ) ನಮ್ಮ ಸೌರ ಮಂಡಲ ಬಿಟ್ಟು ಅನ್ಯ ನಕ್ಷತ್ರಗಳ ಗ್ರಹಗಳ ಒಳಗಿನ ಸತ್ಯಾನ್ವೇಷಣೆಯ ಅಭ್ಯಾಸದಲ್ಲಿ ಇದು ಅತಿ ದೊಡ್ಡ ಹೆಜ್ಜೆಯಾಗುವುದರಲ್ಲಿ ಸಂದೇಹವಿಲ್ಲ. ಇದರಲ್ಲಿ ನಾವು ಗಮನಿಸಬಹುದಾದ ಇನ್ನೊಂದು ವಿಚಾರವೆಂದರೆ, ನಮ್ಮ ಭೂತ-ಭವಿಷ್ಯಗಳನ್ನು ನಮ್ಮ ಹುಟ್ಟಿನಲ್ಲಿ ಗುರುತಿಸಿದ ಗ್ರಹಗಳ ಅನುಗ್ರಹದಿಂದ ಎಂದು ನಂಬುವ ನಾವು, ಒಮ್ಮೆ ಈ ಗ್ರಹ ತೋರುತ್ತಿರುವಂತೆ ನಮ್ಮ ಒಳಗೆ ನಾವು ಮಾಡಲ್ಪಟ್ಟಿರುವ ಸರಿ-ತಪ್ಪುಗಳ, ಭಾವನೆ-ಉದ್ದೇಶಗಳ, ಗುಣ-ಋಣಗಳ ಕಡೆ ಗಮನ ಹರಿಸಿದರೆ ಯಾವ ಗ್ರಹಾನುಗ್ರಹದ ಮೊರೆ ಹೋಗದೆ, ನಮ್ಮ ನಮ್ಮ ಗ್ರಹಗತಿಯನ್ನು ನಾವೇ ನಿಯಂತ್ರಿಸಬಹುದೇನೋ ಪ್ರಯತ್ನಿಸಿ ನೋಡಿ!




**Source:** [www.snexplores.org](www.snexplores.org)

**ಲೇಖನ: ಜೈಕುಮಾರ್ ಆರ್.**
**ಡಬ್ಲ್ಯೂ. ಸಿ. ಜಿ. ಬೆಂಗಳೂರು ನಗರ ಜಿಲ್ಲೆ**

# ಪರಿಸರ ಉಳಿಸಿ

ಸ್ವಚ್ಛಂದದ ಗಾಳಿಬೀಸಿ
ಸುವಾಸನೆಯ ಹೂವ ಹಾಸಿ
ಹಕ್ಕಿಗಳ ಇಂಚರದ ರಾಗ ಸೂಸಿ
ಅನುದಿನ ಸಾಗುತ್ತಿತ್ತು ಆರೋಗ್ಯದ ಭವ್ಯಜ್ಯೋತಿ

ಸ್ವಚ್ಛ ಗಾಳಿಯಿಲ್ಲ, ಹಕ್ಕಿಗಳ ಕಲರವವಿಲ್ಲ
ಸುವಾಸನೆಯ ಪರಿಮಳವಿಲ್ಲ
ಮಣ್ಣಲ್ಲಾಡುವ ಕಂದಮ್ಮಗಳ ನಗೆಯ ಶಬ್ದ ಕೇಳುತ್ತಿಲ್ಲ
ಪರಿಸರವೆಲ್ಲ ನಾಶ ಮಾಡಿ ಮಾಲಿನ್ಯವ ಕೇಳೋರಿಲ್ಲ

ಕಾಂಕ್ರೀಟ್ ಜಂಗಲ್ ನ ನಿರ್ಮಾಣ ಮಾಡಿ
ಚರಂಡಿಯ ಗಬ್ಬುನಾಥ ಹರಡಿ
ನೀರಿನ ಇಂಗು ಆಗುತ್ತಿಲ್ಲ
ಮಣ್ಣಿನ ಫಲವು ಹೆಚ್ಚುತ್ತಿಲ್ಲ

ಎಲ್ಲೆಂದರಲ್ಲಿ ಹೊಲಸು ತುಂಬಿಸಿ
ಸದ್ದಿಲ್ಲದೆ ಪ್ಲಾಸ್ಟಿಕ್ ಬಳಸಿ
ಹಚ್ಚ ಹಸುರಿಗೆ ಕೊಡಲಿ ಹೊಡೆಸಿ
ನರವಿಲ್ಲದ ಜೀವನದಿ ಬಾಳುವೆವು ನಳನಳಿಸಿ

ಪರಿಸರದ ನಿಯಮ ಪಾಲಿಸಿ
ನಿಸರ್ಗದುಳಿವಿಗೆ ಗಮನವಹಿಸಿ
ಮಾಲಿನ್ಯಕಾರಕ ಬಳಕೆ ತಗ್ಗಿಸಿ
ಒಕ್ಕೊರಲಿ ಹೇಳೋಣ ಪರಿಸರ ಉಳಿಸಿ ಪರಿಸರ ಉಳಿಸಿ.

- ರಾಮಲಿಂಗ ಮಾಡಗಿರಿ
ರಾಯಚೂರು ಜಿಲ್ಲೆ

© ಧನರಾಜ್ ಎಂ.

# ಪ್ರಕೃತಿ ಬಿಂಬ



**ಹಳದಿ ಹುಬ್ಬಿನ ಪಿಕಳಾರ** **© ಅರವಿಂದ ಕೂಡ್ಲ**

ಭಾರತ, ಸಿಲೋನ್, ಬಾಂಗ್ಲಾದೇಶ, ಬರ್ಮಾ ದೇಶಗಳಲ್ಲಿನ ಎಲೆ ಉದುರುವ ಕಾಡು ಮತ್ತು ಪಶ್ಚಿಮಘಟ್ಟ ಕಾಡುಗಳಲ್ಲಿ ಕಾಣಸಿಗುವ ಹಳದಿ ಹುಬ್ಬಿನ ಪಿಕಳಾರ ಹಕ್ಕಿಯು ಪಿಕ್ನೋನೋಟಿಡೇ (Pycnonotidae) ಕುಟುಂಬಕ್ಕೆ ಸೇರುತ್ತದೆ. ಇವುಗಳನ್ನು ವೈಜ್ಞಾನಿಕವಾಗಿ ಅಕ್ರಿಟಿಲ್ಲಸ್ ಇಂಡಿಕಾ (*Acritillas indica*) ಎಂದು ಕರೆಯಲಾಗುತ್ತದೆ. ತೆಳು ಹಳದಿ ಮಿಶ್ರಿತ ಹಸುರು ಬಣ್ಣದ, ಮೈನಾ ಗಾತ್ರದ ಈ ಹಕ್ಕಿಯ ತಲೆಯ ಮೇಲೆ ಕಪ್ಪು ಪುಕ್ಕಗಳ ಚಿಕ್ಕ ಚೊಟ್ಟಿ ಇದ್ದು, ಹೊಟ್ಟೆ ಮತ್ತು ಎದೆ ತೆಳು ಹಳದಿ ಬಣ್ಣದಲ್ಲಿರುತ್ತದೆ ಹಾಗೂ ಹುಬ್ಬಿನ ಮೇಲೆ ಬಿಳಿ ಪಟ್ಟೆ ಇರುತ್ತದೆ. ಸಾಮಾನ್ಯವಾಗಿ ಮೌನಿಯಾದ ಹಕ್ಕಿಯಾದರೂ ಗುಂಪಿನಲ್ಲಿದ್ದಾಗ ನಿರಂತರವಾಗಿ ಕೂಗುತ್ತಾ ಸಂಭಾಷಿಸುತ್ತದೆ. ಕಳಿತ ಹಣ್ಣುಗಳು, ಕೀಟಗಳು ಮತ್ತು ಹೂವಿನ ಮಕರಂದ ಇದರ ಆಹಾರವಾಗಿವೆ. ಇವುಗಳು ಪೊದೆಗಳಲ್ಲಿ ನಾರಿನಿಂದ ನೆಯ್ದು ಗೂಡನ್ನು ಮಾಡಿ ಎರಡು ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತವೆ.




**ಸಣ್ಣ ಕುಟ್ರು** © **ಅರವಿಂದ ಕೂಡ್ಲ**

ದಕ್ಷಿಣ ಭಾರತದ ನಿತ್ಯ ಹರಿದ್ವರ್ಣ, ಅರೆ ನಿತ್ಯಹರಿದ್ವರ್ಣ ಕಾಡುಗಳು, ತೋಟ ಮತ್ತು ಉದ್ಯಾನವನಗಳಲ್ಲಿ ಕಾಣಸಿಗುವ ಈ ಕುಟ್ರು ಹಕ್ಕಿಯು ಮೆಗಾಲೈಮಿಡೆ (Megalaimidae) ಕುಟುಂಬಕ್ಕೆ ಸೇರುತ್ತದೆ. ಇದರ ವೈಜ್ಞಾನಿಕ ಹೆಸರು ಸೈಲೋಪೋಗಾನ್ ವಿರಿಡಿಸ್ (Psilopogon viridis) ಎಂಬುದಾಗಿದೆ. ತಲೆ ಮತ್ತು ಕತ್ತು ತಿಳಿ ಕಂದು ಬಣ್ಣದ್ದಾಗಿದ್ದು, ಎದೆ ಮೇಲೆ ಬಿಳಿ ಗೆರೆಗಳು ಇರುತ್ತವೆ. ಕೆನ್ನೆ ಹಾಗೂ ಗದ್ದ ಬಿಳಿಯಾಗಿದ್ದು, ಹಸಿರು ರೆಕ್ಕೆ ಹಾಗೂ ಮೋಟು ಬಾಲವಿರುತ್ತದೆ ಮತ್ತು ಕೇಸರಿ ಕೊಕ್ಕಿನ ಸುತ್ತ ಮೀಸೆಯನ್ನು ಹೊಂದಿರುತ್ತದೆ. ಇವುಗಳು ಹಣ್ಣುಗಳನ್ನು ತಮ್ಮ ಆಹಾರವಾಗಿ ಸೇವಿಸಿ, ಬೀಜ ಪ್ರಸರಣೆಯಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತವೆ. ಸಾಮಾನ್ಯವಾಗಿ ಹಳೆಯ ಮರದ ಕೊಂಬೆಗಳಲ್ಲಿ ಸುಮಾರು 20 ದಿನಗಳವರೆಗೆ ರಂಧ್ರಗಳನ್ನು ಕೊರೆದು ಗೂಡನ್ನು ಮಾಡಿ ಮೂರು ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತವೆ.



**ಸಣ್ಣ ಕಳ್ಳಿಪೀರ** **© ಅರವಿಂದ ಕೂಡ್ಲ**

ಏಷ್ಯಾ ಖಂಡದ ವಿವಿಧ ಪ್ರದೇಶಗಳಲ್ಲಿನ ಶುಷ್ಕ ಮತ್ತು ಅರೆ-ಶುಷ್ಕ ಆವಾಸಸ್ಥಾನಗಳು, ತೆರೆದ ಕಾಡುಗಳು, ಕೃಷಿಭೂಮಿಗಳು ಮತ್ತು ಮರಳಿನ ದಂಡೆಗಳಲ್ಲಿ ಕಾಣಸಿಗುವ ಸಣ್ಣ ಕಳ್ಳಿಪೀರ ಹಕ್ಕಿಯು ಮೆರೋಪಿಡೆ (Meropidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ ಮೆರೋಪ್ಸ್ ಓರಿಯೆಂಟಲಿಸ್ (Merops orientalis) ಎಂದು ಕರೆಯಲಾಗುತ್ತದೆ. ದೇಹವು ಹಸಿರು ಬಣ್ಣದಲ್ಲಿದ್ದು, ಕಣ್ಣು ಮತ್ತು ನೀಲಿ ಬಣ್ಣದ ಗಂಟಲಿನ ಮೇಲೆ ಕಪ್ಪು ಪಟ್ಟಿಯನ್ನು ಹೊಂದಿರುತ್ತದೆ. ತಲೆಯ ಮೇಲ್ಭಾಗ ಮತ್ತು ಕತ್ತಿನ ಹಿಂಭಾಗವು ಕಂದು ಬಣ್ಣವನ್ನು ಹೊಂದಿರುತ್ತವೆ. ಹಾರುವಾಗ ರೆಕ್ಕೆಯ ಕೆಳಗಿನ ಕಪ್ಪು ಅಂಚಿನಿಂದ ಕೂಡಿರುವ ಕಂದು ಬಣ್ಣವು ಪ್ರಧಾನವಾಗಿ ಕಾಣುತ್ತದೆ. ಇವುಗಳು ಜೇನುನೊಣ, ಕಣಜಗಳು ಮತ್ತು ಇರುವೆಗಳಂತಹ ವಿವಿಧ ಕೀಟಗಳನ್ನು ತಿನ್ನುತ್ತವೆ. ಮರಳಿನ ದಂಡೆಯಲ್ಲಿ ಸುರಂಗದಂತಹ ಗೂಡುಗಳನ್ನು ಮಾಡಿ 3-5 ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತವೆ.




**ಕೆಂದಲೆ ಕಳ್ಳಿಪೀರ** © **ಅರವಿಂದ ಕೂಡ್ಲ**

ಭಾರತೀಯ ಉಪಖಂಡ ಮತ್ತು ಅದರ ಸುತ್ತಮುತ್ತಲಿನ ತೆರೆದ ಪ್ರದೇಶಗಳಲ್ಲಿನ ಮರಗಳು, ಕಾಡಿನ ಅಂಚುಗಳು ಮತ್ತು ನದಿ ತೀರ, ರಸ್ತೆಬದಿ ಮತ್ತು ಕೆಲವೊಮ್ಮೆ ತೋಟಗಳಲ್ಲಿ ಕಂಡುಬರುವ ಈ ಕೆಂದಲೆ ಕಳ್ಳಿಪೀರ ಹಕ್ಕಿಯು ಮೆರೋಪಿಡೆ (Meropidae) ಕುಟುಂಬಕ್ಕೆ ಸೇರುತ್ತದೆ. ಇದನ್ನು ವೈಜ್ಞಾನಿಕವಾಗಿ (Merops leschenaulti) ಎಂದು ಕರೆಯಲಾಗುತ್ತದೆ. ದೇಹವು ಪ್ರಕಾಶಮಾನವಾದ ಹಸಿರು ಬಣ್ಣದಲ್ಲಿದ್ದು, ಕೆಳ ಹೊಟ್ಟೆ ಮತ್ತು ಹಿಂಭಾಗದ ಮೇಲೆ ನೀಲಿ ಬಣ್ಣವನ್ನು ಹೊಂದಿರುತ್ತದೆ. ಹಳದಿ ಬಣ್ಣದ ಮುಖ ಮತ್ತು ಗಂಟಲನ್ನು ಹೊಂದಿದ್ದು, ಕಣ್ಣಿನ ಬಳಿ ಕಪ್ಪು ಬಣ್ಣದ ಪಟ್ಟಿಯಿರುತ್ತದೆ. ತಲೆ ಮತ್ತು ಕುತ್ತಿಗೆಯು ಪ್ರಧಾನವಾಗಿ ಕಾಣುವ ಕೆಂಪು ಮಿಶ್ರಿತ ಕಂದು ಬಣ್ಣದ್ದಾಗಿವೆ. ಇವುಗಳು ಜೇನುನೊಣ, ಕಣಜಗಳು ಮತ್ತು ಇರುವೆಗಳಂತಹ ವಿವಿಧ ಕೀಟಗಳನ್ನು ತಿನ್ನುತ್ತವೆ. ಸಾಮಾನ್ಯವಾಗಿ ಮರಳಿನ ದಂಡೆಯಲ್ಲಿ ಸಣ್ಣ ಸುರಂಗಗಳಂತಹ ಗೂಡುಗಳನ್ನು ಮಾಡಿ 5-6 ಮೊಟ್ಟೆಗಳನ್ನು ಇಟ್ಟು ಮರಿ ಮಾಡುತ್ತವೆ.

**ಚಿತ್ರ: ಅರವಿಂದ ಕೂಡ್ಲ**

**ಲೇಖನ: ದೀಪ್ತಿ ಎನ್.**

# ನೀವೂ ಕಾನನಕ್ಕೆ ಬರೆಯಬಹುದು




ಜೂನ್ 5 ವಿಶ್ವ ಪರಿಸರ ದಿನ.
ಸ್ವರ್ಗವೇ ಭೂಮಿಯೊಳಿರದಿರೆ ನೀ ಬೇರೆಲ್ಲಿಯೂ ಇಲ್ಲ ಇಲ್ಲ! ನಮ್ಮ ಭೂಮಿ ಇಷ್ಟು ಸುಂದರವಾಗಿರಲು ಕಾರಣ, ಇಲ್ಲಿನ ಪರಿಸರ.

**"ಈ ಆಗಸ, ಈ ತಾರೆ...**
**ಜುಳುಜುಳುನೆ ಹರಿವ ಜಲಧಾರೆ,**
**ಮುಗಿಲ ಮಲೆಯ ಸಾಲೆ,**
**ಆಹಾ! ಯಾರದು ಈ ಬಗೆ ಲೀಲೆ?"**

ಎಂಬ ಕವಿ ನುಡಿಯಂತೆ ಕಾಡು, ನದಿ, ಸಮುದ್ರ, ಬೆಟ್ಟಗುಡ್ಡ, ಕಣಿವೆ, ಮಂಜು ಜೀವವೈವಿಧ್ಯ ಎಲ್ಲವೂ ಈ ಭೂರಮೆಯ ಸೌಂದರ್ಯ ಹೆಚ್ಚಿಸುವ ಆಭರಣಗಳು. ಜೈವಿಕ ಮತ್ತು ಅಜೈವಿಕ ವಸ್ತುಗಳ ಸಂಯೋಜನೆಯೊಂದಿಗೆ, ಪಂಚಭೂತಗಳಾದ ಗಾಳಿ, ನೀರು, ಬೆಂಕಿ, ಮಣ್ಣು ಮತ್ತು ಆಕಾಶ ಕೂಡಿರುವ ಈ ಭೂಮಿ ಅನೇಕ ಕಾರಣಗಳಿಂದ ತನ್ನ ನೈಜರೂಪವನ್ನು, ಜೀವವೈವಿಧ್ಯತೆಯ ಶ್ರೀಮಂತಿಕೆಯನ್ನು ದಿನೇದಿನೇ ಕಳೆದುಕೊಳ್ಳುತ್ತಿದೆ. ವಾಯುಮಾಲಿನ್ಯ, ಜಲಮಾಲಿನ್ಯ, ಶಬ್ದಮಾಲಿನ್ಯ, ಮಣ್ಣಿನ ಮಾಲಿನ್ಯಗಳಿಂದ ನಮ್ಮ ಸುತ್ತಲಿನ ಪರಿಸರ ಮತ್ತು ಪರಿಸರ ವ್ಯವಸ್ಥೆಯನ್ನು ಕಾಪಾಡಿಕೊಳ್ಳುವುದು ಅನಿವಾರ್ಯವಾಗಿದೆ.

ಅತಿಯಾಗುತ್ತಿರುವ ಅರಣ್ಯನಾಶ, ಪ್ಲಾಸ್ಟಿಕ್ ಬಳಕೆ, ನಗರೀಕರಣ, ರಸ್ತೆ, ಕಾರ್ಖಾನೆಗಳ ನಿರ್ಮಾಣ, ಇವೆಲ್ಲವೂ ಪರಿಸರ ಹಾನಿಗೆ ತಮ್ಮದೇ ರೀತಿಯಲ್ಲಿ ಕೊಡುಗೆ ನೀಡುತ್ತಿವೆ. ಭೂಮಿಗೆ ರಕ್ಷಣಾ ಕವಚದಂತಿರುವ ಓಝೋನ್ ಪದರವು ಹಸಿರುಮನೆ ಪರಿಣಾಮಕ್ಕೆ ಕಾರಣವಾದ ಅನಿಲಗಳಿಂದ ರಂಧ್ರವಾಗುತ್ತಿದೆ. ಈ ಎಲ್ಲ ಅಂಶಗಳನ್ನು ಗಮನಿಸಿ ಮುಂಬರುವ ಅಪಾಯವನ್ನು ತಪ್ಪಿಸುವಂತೆ ಜನರಲ್ಲಿ ಪರಿಸರದ ಬಗೆಗಿನ ಜಾಗೃತಿಯನ್ನು ಮೂಡಿಸಲು ಪ್ರತಿ ವರ್ಷ ಜೂನ್ 5ರಂದು ವಿಶ್ವ ಪರಿಸರ ದಿನವನ್ನು ಆಚರಿಸಲಾಗುತ್ತದೆ.

ಈ ರೀತಿಯ ಪರಿಸರದ ಬಗೆಗಿನ ಮಾಹಿತಿಯನ್ನು ಒದಗಿಸಲು ಇರುವ ಕಾನನ ಇ-ಮಾಸಿಕಕ್ಕೆ ಮುಂದಿನ ತಿಂಗಳ ಸಂಚಿಕೆಗೆ ಲೇಖನಗಳನ್ನು ಆಹ್ವಾನಿಸಲಾಗಿದೆ. ಆಸಕ್ತರು ಪರಿಸರಕ್ಕೆ ಸಂಬಂಧಿಸಿದ ಕಥೆ, ಕವನ, ಛಾಯಾಚಿತ್ರ, ಚಿತ್ರಕಲೆ, ಪ್ರವಾಸ ಕಥನಗಳನ್ನು ಕಾನನ ಮಾಸಿಕದ ಇ-ಮೇಲ್ ವಿಳಾಸಕ್ಕೆ ಕಳುಹಿಸಬಹುದು.

**ಕಾನನ ಪತ್ರಿಕೆಯ ಇ-ಮೇಲ್ ವಿಳಾಸ**: kaanana.mag@gmail.com
**ಅಂಚೆ ವಿಳಾಸ**:
ವೈಲ್ಡ್ ಲೈಫ್ ಕನ್ಸರ್ವೇಷನ್ ಗ್ರೂಪ್,
ಅಡವಿ ಫೀಲ್ಡ್ ಸ್ಟೇಷನ್,
ಒಂಟೆಮಾರನ ದೊಡ್ಡಿ, ರಾಗಿಹಳ್ಳಿ ಅಂಚೆ,
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ,
ಪಿನ್ ಕೋಡ್ : 560083. ಗೆ ಕಳಿಸಿಕೊಡಬಹುದು.



## ಪರಿಸರದ ಬಗೆಗಿನ ಏಕೈಕ ಕನ್ನಡ ಇ–ಮಾಸಿಕಕ್ಕೆ ನೀವೂ ಸಹ ಕೈ ಜೋಡಿಸಿ

## Join hands with the only Kannada e-magazine on environment

ಕಾನನ ಪತ್ರಿಕೆಯು ಹಲವಾರು ಸ್ವಯಂ ಸೇವಕರ ಸಹಾಯದಿಂದ ಯಶಸ್ವಿಯಾಗಿ ೧೫ ವರ್ಷಗಳಿಂದ ಪ್ರಕಟವಾಗುತ್ತಿದ್ದರೂ, ಅದರ ನಿರ್ವಹಣೆಗೆ (website) ಸ್ವಲ್ಪ ವೆಚ್ಚ ತಗುಲುತ್ತದೆ. ಆದ ಕಾರಣ ಸಹಾಯ ಮಾಡಲು ಇಚ್ಛಿಸುವ ದಾನಿಗಳು ದೇಣಿಗೆ ನೀಡುವ ಮೂಲಕ ಪ್ರೋತ್ಸಾಹಿಸಿ ಸಹಕರಿಸಬಹುದು.

With the help of many volunteers kaanana is reaching thousands of readers from past 15 years. But it requires some amount for its maintenance. Hence we request interested candidates to support kaanana by donating.



**Account details are as below ***

**Bank Name: Bank of Baroda**
**Account type: Current account**
**Account no: 67560200001138**
**Account Name: Wildlife Conservation Group**
**IFSC Code: BARB0VJRAGI (zero in middle)**

**SCAN TO PAY**
**WITH ANY BHIM UPI APP**
Merchant Name : WILDLIFE CONSERVATION GROUP

***- Donations are exempted from Income Tax under section 80 G (IT act 1961)**